# ಹರಿಜನ ನಿಧಿ ಮತ್ತು ಕೌಮುದಿ ಎಂಬ ಹುಡುಗಿ

ಹರಿಜನ ನಿಧಿಗೆ ದೇಣಿಗೆ ಸಂಗ್ರಹಿಸುತ್ತಿದ್ದಾಗ ನಡೆದ ಒಂದು ಹೃದಯಸ್ಪರ್ಶಿ ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕು.

ವಡಕರದಲ್ಲಿ ನಾನು ಆಗಷ್ಟೇ ಭಾಷಣ ಮಾಡಿ ಮುಗಿಸಿದ್ದೆ. ಹರಿಜನ ನಿಧಿಗೆ ಒಡವೆ ವಸ್ತುಗಳನ್ನು ದಾನವಾಗಿ ನೀಡುವಂತೆ ಅಲ್ಲಿ ನೆರೆದಿದ್ದ ಮಹಿಳೆಯರಲ್ಲಿ ಬೇಡಿಕೊಂಡಿದ್ದೆ. ಕೊಡುಗೆಯಾಗಿ ದೊರೆತ ಕೆಲವು ವಸ್ತುಗಳನ್ನು ಹರಾಜಿನಲ್ಲಿ ಮಾರುವ ಪ್ರಕ್ರಿಯೆಯೂ ನಡೆದಿತ್ತು.

ಆಗ ಇದ್ದಕ್ಕಿದ್ದಂತೆ ಒಬ್ಬ ಹುಡುಗಿ ವೇದಿಕೆಯ ಮೇಲೆ ಬಂದಳು. ಸುಮಾರು ಹದಿನೈದು ಹದಿನಾರು ವರ್ಷದ ಆಕೆ ತನ್ನನ್ನು ಕೌಮುದಿ ಎಂದು ಪರಿಚಯಿಸಿಕೊಂಡಳು. ತನ್ನ ಚಿನ್ನದ ಕೈಬಳೆಯೊಂದನ್ನು ಆಕೆ ನಿಧಿಗೆ ದೇಣಿಗೆಯಾಗಿ ಕೊಟ್ಟು, ಅದಕ್ಕೆ ಪ್ರತಿಯಾಗಿ ನನ್ನ ಹಸ್ತಾಕ್ಷರವನ್ನು ಬೇಡಿದಳು. ನಾನು ಹಸ್ತಾಕ್ಷರವನ್ನು ಕೊಡುವಷ್ಟರಲ್ಲಿ ಆಕೆ ತನ್ನ ಇನ್ನೊಂದು ಬಳೆ ತೆಗೆದು ನನ್ನ ಮುಂದಿಟ್ಟಳು. 'ಒಂದು ಬಳೆ ಸಾಕಮ್ಮ. ಹಸ್ತಾಕ್ಷರ ಹಾಕಿ ಕೊಡುತ್ತೇನೆ ಇರು' ಎಂದು ನಾನು ಆಕೆಯತ್ತ ತಿರುಗಿ ಇನ್ನೂ ಹೇಳುತ್ತಿರುವಂತೆಯೇ ತನ್ನ ಕೊರಳಲ್ಲಿದ್ದ ಬಂಗಾರದ ಸರವನ್ನು ಆಕೆ ತೆಗೆಯತೊಡಗಿದಳು!

'ಈ ಒಡವೆಗಳನ್ನು ನಿಧಿಗೆ ಅರ್ಪಿಸಲು ನಿನ್ನ ತಂದೆ ತಾಯಿಗಳ ಅನುಮತಿ ಪಡೆದಿರುವೆಯಾ?' ಎಂದು ನಾನು ಆಕೆಯನ್ನು ಕೇಳಿದೆ. ಆಕೆ ಅದಕ್ಕೆ ಉತ್ತರಿಸುವ ತೊಂದರೆ ತೆಗೆದುಕೊಳ್ಳದೆ, ತನ್ನ ಕಿವಿಯೋಲೆಗಳನ್ನು ಕಳಚಲು ಶುರುಮಾಡಿದಳು!

ಆಗ ಜನರ ಮಧ್ಯದಿಂದ ಮೆಚ್ಚುಗೆಯ ಉದ್ಗಾರಗಳು ಕೇಳಿಬರತೊಡಗಿದವು. ನಾನು ಮತ್ತೊಮ್ಮೆ ಆಕೆಯನ್ನು, 'ಈ ಒಡವೆಗಳನ್ನು ನಿಧಿಗೆ ಅರ್ಪಿಸಲು ನಿನ್ನ ತಂದೆ ತಾಯಿಗಳ ಅನುಮತಿ ಪಡೆದಿರುವೆಯಾ?' ಎಂದು ಕೇಳಿದೆ. ಆಕೆ ಉತ್ತರಿಸಲಿಲ್ಲ; ತೀರಾ ಮುಗ್ಧವಾಗಿ ತನ್ನ ಕಿವಿಯೋಲೆಗಳನ್ನು ಬಿಚ್ಚಿ ನನ್ನೆದುರಿಗಿಟ್ಟಳು.

ಸಂಕೋಚದ ಮುದ್ದೆಯಂತಿದ್ದ ಆ ಹುಡುಗಿಯಿಂದ ನಾನು ಉತ್ತರ ಪಡೆಯುವ ಮಾತು ದೂರವೇ ಉಳಿಯಿತು. ನನ್ನ ಪ್ರಶ್ನೆಗೆ ಅಲ್ಲಿದ್ದವರಲ್ಲೇ ಯಾರೋ ಒಬ್ಬರು ಉತ್ತರ ಕೊಟ್ಟರು. ಆ ಹುಡುಗಿಯ ತಂದೆ ಅಲ್ಲಿ ನಡೆಯುತ್ತಿದ್ದ ಹರಾಜು ಪ್ರಕ್ರಿಯೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ದೇಣಿಗೆ ಸಂಗ್ರಹಿಸಿ ಕೊಡುವಲ್ಲಿ ಆತ ಅತೀವ ಕಾಳಜಿ ವಹಿಸಿದ್ದ. ತನ್ನ ಮಗಳು ಒಡವೆಗಳನ್ನು ದಾನ ಮಾಡಿದ್ದಕ್ಕೆ ಆತನಿಗೆ ಆಕ್ಷೇಪಣೆ ಇರಲು ಸಾಧ್ಯವಿಲ್ಲ ಎಂದು ನನ್ನ ಪ್ರಶ್ನೆಗೆ ಉತ್ತರಿಸಿದವರು ವಿವರಿಸಿದರು. ನಾನು ಆ ಕುಟುಂಬದ ಔದಾರ್ಯವನ್ನು ಕಂಡು ಮೂಕನಾದೆ.

'ನಿಧಿಗೆ ದೇಣಿಗೆ ಕೊಟ್ಟ ಒಡವೆಗಳಿಗೆ ಬದಲಾಗಿ ಬೇರೆ ಒಡವೆ ಮಾಡಿಸಿ ಕೊಡುವಂತೆ ನಿಮ್ಮ ತಂದೆಯನ್ನು ನೀನು ಕೇಳುವಂತಿಲ್ಲ' ಎಂದು ನಾನು ಕೌಮುದಿಗೆ ಹೇಳಿದೆ. ಕೂಡಲೇ ಆ ಹುಡುಗಿ ಒಪ್ಪಿಕೊಂಡಳು. ಹಸ್ತಾಕ್ಷರ ನೀಡುತ್ತ, 'ನಿನ್ನ ತ್ಯಾಗ, ಔದಾರ್ಯಗಳ ಬೆಲೆ ನೀನು ಕೊಟ್ಟ ಒಡವೆಗಳಿಗಿಂತ ಎಷ್ಟೋ ಪಾಲು ಮಿಗಿಲಾದದ್ದು' ಎಂದು ಬರೆದು ಸಹಿ ಹಾಕಿ ಕೊಟ್ಟೆ.

ಕೌಮುದಿಯ ಹೆಸರು ಹರಿಜನರ ಸೇವೆಗೆ ಕೊಡುಗೆ ನೀಡಿದವರ ಯಾದಿಯಲ್ಲಿ ಸ್ಥಿರವಾಗಲಿ ಎಂದು ಹಾರೈಸುತ್ತೇನೆ.

(ಜನವರಿ 13, 1934)